ರಿಜಿಸ್ಟ್ರೇರ್ಷ ಇಲಾಖೆ.

ಮೈಸೂರು ಶೀಮೆಯ ಡಿಸ್ಟ್ರಿಕ್ಟು ರಿಜಿಸ್ಟ್ರಾರ್‌ಗಳಿಗೆ.

1886—87ನೇ ಇಸವಿಯ 15ನೇ ನಂಬರ್ ಸರ್‌ಕ್ಯೂಲರ್.

ತಾರೀಖು 4ನೇ ಫಿಬ್ರವರೀ 1887.

1879ನೇ ಇಸವಿ XIIನೇ ನಂಬರ್ ಆಕ್ಟಿನ 107ನೇ ಸೆಕ್‌ಷ್ಯನ ಮೂಲಕ ತಿದ್ದುಪಡಿಯಾದ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇರ್ಷ ಆಕ್ಟಿನ 89ನೇ ಸೆಕ್‌ಷನಿನಲ್ಲಿ ಕಂಡ, ಸಿವಿಲ್ ಪ್ರೊಸೀಡ್ಯುರ್ ಕೋಡ್ 316ನೇ ಸೆಕ್‌ಷ್ಯನ ಅನುಸರಿಸಿ ಆಯಾ ಕೋರ್ಟ್‌ನವರಿಂದ ಕೊಡಲ್ಪಡುವ ಸರ್ಟಿಫಿಕೇಟಿನ ನಕಲು, ಅಂಥಾ ಸರ್ಟಿಫಿಕೇಟಿನಲ್ಲಿ ನಮೂದಾಗಿರುವ ಸ್ಥಿರಸ್ವತ್ತಿನ ವಿಷ್ಯ ಅಥವಾ ಬಂದು ಭಾಗವು ಯಾವ ಸ್ಥಳಾಧಿಕಾರಕ್ಕೊಳಪಟ್ಟಿರುತಿದೆಯೋ ಅಂಥಾ ರಿಜಿಸ್ಟ್ರಿಂಗ್ ಆಫಿಸರಿಗೆ ಕಳುಹಿಸಲ್ಪಡತಕ್ಕದ್ದೆಂಬ ನಿಯಮವಿದೆ, ಸರ್ಟಿಫಿಕೇಟ್ ಪಡೆದವರು ಅದನ್ನು ರಿಜಿಸ್ಟ್ರೇರ್ಷ ಬ್ಯೆಹಾಜರ್‌ಪಡಿಸತಕ್ಕದ್ದೆಂಬ ಆವಶ್ಯಕತೆಯನ್ನು ರದ್ದುಪಡಿಸುತಿದೆಯೆಂದು ಚೀಫ್ ಕೋರ್ಟು ಜಡ್ಜ್‌ಗಳು ನಿಬಂಧಿಸಿರುತ್ತಾರೆ. ಆದದರಿಂದ 1877ನೇ ಇಸವಿ ಆಗಸ್ಟು 30ನೇ ವುರ್ತುಂವಳ್ಳಿ ಈ ಆಫಿಸಿನ 3ನೇ ನಂಬರ್ ಸರ್‌ಕ್ಯೂಲರ್ ರದ್ದಾದಂತೆ ಭಾವಿಸಲ್ಪಡತಕ್ಕದ್ದು. ಮತ್ತು ಡಿಸ್ಟ್ರಿಕ್ಟು ರಿಜಿಸ್ಟ್ರಾರ್‌ಗಳು ಈ ವಿಷಯವನ್ನು ತಮ್ಮ ಸಬ್ ರಿಜಿಸ್ಟ್ರಾರ್‌ಗಳಿಗೆ ತಿಳಿಸಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಎಸ್. ವೆಂಕಟವರದಯ್ಯಂಗಾರ್,
ಮೈಸೂರು ಶೀಮೆಯ ಇನ್‌ಸ್ಪೆಕ್ಟರ್‌ಜನರಲ್ ಆಫ್ ರಿಜಿಸ್ಟ್ರೇರ್ಷ.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ಯ 1887ನೇ ಇಸವಿ ಅರ್ಜೀ ನಂಬರ್ 141.

ಮೃತಪಟ್ಟ ಕರ್‌ಪುರ ಕೇಷಗಿರಿರಾಯರ ಆಸ್ತಿ ವಿಷಯದಲ್ಲಿ —

ಅರ್ಜೀದಾರ ಬೆಂಗಳೂರು ವಿದ್ಯೇಕಟ್ಟೆಯಲ್ಲಿರುವ ಕರ್‌ಪುರ ಕ್ರಿಷ್ಣರಾವ್ ಮೃತಪಟ್ಟ ಸದರೀ ಕೇಷಗಿರಿರಾಯರಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ಸ್ಥಳದ ಕರ್‌ಪುರ ಕ್ರಿಷ್ಣರಾಯರು ಸದರೀ ವಾಸಸ್ಥರಾಗಿ ಮೃತಪಟ್ಟ ಕೇಷಗಿರಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿ ಯಿರುತ್ತಾರೆ.

ಸದರೀ ದರಖಾಸ್ತುದಾರರಾದ ಕ್ರಿಷ್ಣರಾಯರ ಅರ್ಜೀಯನ್ನು 1887ನೇ ಇಸವಿ ಮಾರ್ಚೀ ತಿಂಗಳು 26ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೇಷಗಿರಿರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಅರ್ಜೀ ನಂಬರ್. 172.

ಮೃತಪಟ್ಟ ಗುರುಮೂರ್ತಿ ಶಾಸ್ತ್ರೀರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಕೋಲಾರದಲ್ಲಿರುವ ನರಸಮ್ಮ, ಮೃತಪಟ್ಟ ಸದರೀ ಗುರುಮೂರ್ತಿ ಶಾಸ್ತ್ರೀರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಕೋಲಾರ ಸ್ಥಳದ ನರಸಮ್ಮನು ಸದರೀ ವಾಸಸ್ಥರಾಗಿ ಮೃತಪಟ್ಟ ಗುರುಮೂರ್ತಿಶಾಸ್ತ್ರೀರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನರಸಮ್ಮನ ಅರ್ಜಿಯನ್ನು 1887ನೇ ಇಸವಿ ಮಾರ್ಚಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುಮೂರ್ತಿಶಾಸ್ತ್ರೀರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಫಿಬ್ರವರೀ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ್.